Sri H. M. CHANNABASAPPA.—I may tell you that I want notice for that.

ಶ್ರೀ ವಿ. ವೆಂಕಟಪ್ಪ.—ಹಾಗಾದರೆ ಈ ಸೇತುವೆಯನ್ನು ಕಟ್ಟಿರುವುದು ಎಲ್ಲಿ?

Sri H. M. CHANNABASAPPA.—Information has been placed before the Hon'ble House. If there is anything on which he wants further information, I will gladly give him if he gives me notice.

ಶ್ರೀ ವಿ. ವೆಂಕಟಪ್ಪ.—ಯಾವ ವರ್ಷ ಈ ಸೇತುವೆಯನ್ನು ಕಟ್ಟಿದ್ದು?

Sri H. M. CHANNABASAPPA.—This is a matter for which I require notice.

ಶ್ರೀ ವಿ. ವೆಂಕಟಪ್ಪ.—16 ಸೇತುವೆಗಳನ್ನು ಕಟ್ಟಿಸಿದ್ದೇವೆ ಎಂದಿದೆ. ಇದನ್ನು ಕಟ್ಟಿಸಿದ್ದು 1953-54ರಲ್ಲಯೇ, 1954-55ರಲ್ಲಿಯೇ, 1955-56ರಲ್ಲಿಯೇ? ಎಂದು ಕೇಳಿದ್ದೇನೆ.

Sri H. M. CHANNABASAPPA.—I would like to have notice for that.

Anecut across Dandavathi River.

Q.—619. Sri MALLIKARJUNAPPA GOWDA (Sorab-Shikaripur).—

Will the Government be pleased to state :—

(*a*) since what year attempts are being made to give irrigation facilities to certain villages of Anavatti and Kuppagadde hoblies by constructing anecut across Dandavathi river in Sorab Taluk;

(*b*) whether plan and estimate have been prepared; and the estimated cost;

(*c*) if so, when they propose to take up the work of constructing this anecut;

(*d*) whether it has come to their notice that the villages which get the benefit of these waters are not getting sufficient rains every year;

(*e*) whether representations have been received from the people to construct this anecut at a higher place than the proposed site and thus give irrigation facilities to more villages;

(*f*) if so, whether a survey has been conducted again;

(*g*) whether they would arrange to take up the survey work at least now and come to a decision and take up the work immediately?

A.—Sri H. M. CHANNABASAPPA (Minister for Industries).—

(*a*) Since about 1920.

(*b*) Yes; Rs. 30 lakhs.

(*c*) It may be possible to take up this work during the III Five-Year Plan period.

(*d*) The rainfall in these areas is about 34" to 40".

(*e*) No; during enquiry, a suggestion was made to locate the anecut higher up to prevent submersion of the lands;

(*f*) No.

(*g*) The project prepared after necessary survey is being re-cast. Work can be taken up only when the project is included in the Plan sanctioned.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—1920ನೆ ಇಸವಿಯಲ್ಲಿ ಅಂದಾಜು ಆದದ್ದು ಇದುವರೆಗೂ ನಿಧಾನವಾಗುವುದಕ್ಕೆ ಕಾರಣವೇನು?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅಂದಾಜಾಗಿ ಈಗ ಆದು ಶಿಫಾರ್ಸು ಆಗಿ ಬಂದಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಇದರಿಂದ ಎಷ್ಟು ಎಕರೆ ನೀರಾವರಿ ಆಗುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಂಟು ಸಾವಿರ ಎಕರೆ ನೀರಾವರಿ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಇದಕ್ಕಿಂತ ಹಿಂದೆ ಅಂದಾಜು ಆಗಿರುವುದು ಯಾವುದಾದರೂ ಇದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಿಂದೆ ಆಗಿರುವುದು ಗೊತ್ತಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈ ಅಣೆಕಟ್ಟನ್ನು ಕಟ್ಟುವುದರಿಂದ ಉಪಯೋಗವಾಗತಕ್ಕ ಕಡೆ ಯಾವಾಗಲೂ ಮಳೆ ಸರಿಯಾಗಿ ಆಗುವುದಿಲ್ಲ ಎನ್ನುವುದು ಕಮ್ಮಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಾಸರಿ 48 ಅಂಗುಲಗಳ ಮಳೆಯಾಗುತ್ತದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಆ ಭಾಗದಲ್ಲಿ ಸರಾಸರಿ 48 ಅಂಗುಲಗಳ ಮಳೆಯಾಗುವುದು ನಿಜವಲ್ಲವೆಂದು ಹೇಳಿದರೆ ಅದನ್ನು ಒಪ್ಪುತ್ತೀರಾ? ದಯವಿಟ್ಟು ಇದನ್ನು ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತೃತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.